ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **18.03.2021**

ಪಾಟೀ ಸವಾಲುಃ ಶ್ರೀ ಎಂ ಟಿ ಎಸ್ ವಕೀಲರಿಂದ

ದಾವಾಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ದಾವಾಸ್ವತ್ತುಗಳಲ್ಲಿ ಕೆಲವು ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸರಿ. ದಾವಾಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತುಗಳಾಗಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸಾಕ್ಷಿಯು 1984 ರಿಂದ ನಾವೆಲ್ಲರೂ ಸ್ವಾಧೀನದಲ್ಲಿ ಇರುತ್ತೇವೆ. ಎಲ್ಲಾ ಜಮೀನುಗಳು ಜಂಟಿ ಮಾಲೀಕತ್ವದಲ್ಲಿ ಇರುತ್ತದೆ ಎಂದರೆ ಸರಿ.

ದಿಃ 09.05.1984 ರಲ್ಲಿ ಪಂಚಾಯ್ತಿ ಪಾರಿಕತ್ತು ಆಗಿದ್ದು, ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಯಾವ ಯಾವ ಸ್ವತ್ತು ಯಾರ ಯಾರ ಹೆಸರಿಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಪಾಲು ಪಾರಿಕತ್ತು ಮಾಡಬೇಕಾದರೆ ಯಾರು ಯಾರು ಸೇರಿದ್ದರು ಎಂದು ಕೇಳಿದರೆ ಗುರುಬಸಪ್ಪ, ರಂಗಸ್ವಾಮಿಯವರು ಸೇರಿರುತ್ತಾರೆ ಮತ್ತು ಇನ್ನು ಮೂರು ನಾಲ್ಕು ಜನ ಇರುತ್ತಾರೆ, ಅವರ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ. ನಾನು ಪಾಲು ಪಾರಿಕತ್ತನ್ನು ವಾದಿ ಸೇರಿ ಎಲ್ಲರೂ ಮಾಡಿಕೊಂಡಿರುತ್ತೇವೆ. ಆ ಪಾಲು ಪಾರಿಕತ್ತನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಹೇಳಿಕೆಯಲ್ಲಿ ಪಾಲು ಪಾರಿಕತ್ತಿನಲ್ಲಿ ಯಾವ ಯಾವ ಸರ್ವೆ ನಂಬರ್ ಯಾರ ಯಾರಿಗೆ ಬಂದಿರುತ್ತದೆ ಎಂದು ನಾನು ಹೇಳಿದ್ದೇನೆ. ಯಾವುದೆ ಪಾಲು ಪಾರಿಕತ್ತು ಆಗಿರುವುದಿಲ್ಲ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ಪಾರಿಕತ್ತಿನ ಬಗ್ಗೆ ವಾದಿಗೆ ಗೊತ್ತಿರುವುದಿಲ್ಲ ಆದ್ದರಿಂದ ಅದನ್ನು ವಾದಿ ಯಾವುದೆ ವಾದಿಯ ಹಕ್ಕನ್ನು ಬದ್ಧ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಂದಿರು ಅವರ ಜೀವನಾಂಶಕ್ಕೆ ಒಂದು ಸರ್ವೆ ನಂಬರ್ ನ್ನು ಇಟ್ಟುಕೊಂಡಿರುತ್ತಾರೆ, ಅದರ ಸರ್ವೆ ನಂಃ 43/5 ಆಗಿರುತ್ತದೆ. ನನ್ನ ತಂದೆ ತಾಯಿ ಯಾವುದೆ ಸ್ವತ್ತನ್ನು ಜೀವನಾಂಶಕ್ಕೆ ಇಟ್ಟುಕೊಂಡಿರುವುದಿಲ್ಲ, ಅದು ನಮ್ಮ ಒಟ್ಟು ಕುಟುಂಬದ ಸ್ವತ್ತಾಗಿ ಮುಂದುವರೆದು ಬರುತ್ತಿದೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ನನ್ನ ತಂದೆ ಯಾವ ಸ್ವತ್ತುಗಳನ್ನು ಮರಣ ಶಾಸನದ ಮುಖಾಂತರ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಮರಣ ಶಾಸನ ಯಾವ ದಿನಾಂಕದಂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 3 ಮತ್ತು 5 ನೇ ಪ್ರತಿವಾದಿಗಳ ಪರವಾಗಿ ಕೆಲವು ಆಸ್ತಿಗಳನ್ನು ಮರಣ ಶಾಸನದ ಪ್ರಕಾರ ನನ್ನ ತಂದೆ ತಾಯಿಗಳು ಮಾಡಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಅದು ಯಾವ ದಿನಾಂಕದಂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಎಲ್ಲಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆ ತಾಯಂದಿರಿಗೆ ಒಟ್ಟು ಕುಟುಂಬದ ಸ್ವತ್ತುಗಳು ಆಗಿದ್ದರಿಂದ ಯಾವುದೆ ಮರಣ ಶಾಸನವನ್ನು ಮಾಡಲು ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ತಾಯಿ ಆ ಸ್ವತ್ತುಗಳನ್ನು ಸಂಪಾದನೆ ಮಾಡಿರುತ್ತಾರೆ ಅವರಿಗೆ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 3 ಮತ್ತು 5 ರವರು ಮರಣ ಶಾಸನವನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿ 3 ಮತ್ತು 5 ರವರಿಗೆ ಸೃಷ್ಟಿಸಿಕೊಂಡ ಮರಣ ಶಾಸನದಿಂದ ಹಕ್ಕು ಹೋದ ಕಾರಣ ಅವರಿಗೆ ಯಾವುದೆ ಹಕ್ಕು ಪ್ರಾಪ್ತಿಯಾಗುವುದಿಲ್ಲ ಎಂದರೆ ಸುಳ್ಳು. ನನ್ನ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿ 3 ಮತ್ತು 5 ರವರಿಗೆ ಮರಣ ಶಾಸನದ ಮುಖಾಂತರ ಕೆಲವು ಆಸ್ತಿಗಳು ಹೋಗಿರುವುದಾಗಿ ಹೇಳಿರುತ್ತೇನೆ. ಪ್ರತಿವಾದಿ 3 ಮತ್ತು 5 ರವರ ಪರವಾಗಿ ಯಾವುದೆ ಮರಣ ಶಾಸನ ಆಗದೆ ಇದ್ದರೂ ವಾದಿಗೆ ಆಸ್ತಿಯ ಹಕ್ಕನ್ನು ಕೊಡಲು ತಪ್ಪಿಸಿಕೊಳ್ಳಲು ಪ್ರತಿವಾದಿ 3 ಮತ್ತು 5 ರವರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಮರಣ ಶಾಸನ ಆಗಿರುತ್ತದೆ ಎಂದು ನುಡಿಯುತ್ತಾರೆ. ಮರಣ ಶಾಸನ ಆಗಿರುವ ಆಸ್ತಿಗಳ ಮೇಲೆ ಕೂಡ ವಾದಿಗೆ ಸಮವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ಐಟಂ ನಂ: 4 ರ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ.

ಐಟಂ ನಂ: 4 ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತಲ್ಲ ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸುಳ್ಳು. ದಿ: 06.12.1993 ರಲ್ಲಿ ಐಟಂ ನಂ: 4 ಸ್ವತ್ತನ್ನು ನನಗೆ

ನನ್ನ ತಾಯಿ ಕ್ರಯಕ್ಕೆ ಕೊಟ್ಟಿರುವುದಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದ್ದು, ಅದು ಸುಳ್ಳು ಮತ್ತು ಮೋಸದಿಂದ ಮಾಡಿಕೊಂಡಿರುವ ಕ್ರಯ ಆಗಿರುತ್ತದೆ ಎಂದರೆ ಸರಿಯಲ್ಲ. ಐಟಂ ನಂಃ 4 ಸ್ವತ್ತು ಕ್ರಯವಾದ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದಲ್ಲಿ ಇರುವ ಸ್ವತ್ತಾಗಿ ಮುಂದುವರೆದುಕೊಂಡು ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಐಟಂ ನಂಃ 4 ನ್ನು ಪಡೆದಾಗ ನನ್ನ ಅಣ್ಣ ತಮ್ಮಂದಿರು ಮತ್ತು ವಾದಿಯವರ ಹತ್ತಿರ ಸಮ್ಮತಿ ಪಡೆದುಕೊಂಡಿರುವುದಿಲ್ಲ. ನನ್ನ ತಾಯಿಗೆ ಐಟಂ ನಂಃ 4 ನ್ನು ಮಾರಾಟ ಮಾಡಲು ಯಾವುದೆ ವೈಯಕ್ತಿಕ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ಅವರ ಅನಾರೋಗ್ಯದ ಕಾರಣ ಆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ನನಗೆ ಐಟಂ ನಂಃ 4 ನ್ನು ಮಾರಾಟ ಮಾಡಬೇಕಾದ ಸಂಧರ್ಭದಲ್ಲಿ ನನ್ನ ಜೊತೆ ಇದ್ದರು ಎಂದರೆ ಸರಿ. ನನ್ನ ತಾಯಿ ನನ್ನ ಜೊತೆ ಇದ್ದಾಗ ನನ್ನ ತಾಯಿಗೆ ಗೊತ್ತಿಲ್ಲದೆ ಮೋಸ ಮಾಡಿ ಹಾಗೆಯೆ ವಾದಿ ಮತ್ತು ಇತರೆ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಐಟಂ ನಂಃ 4 ರ ಕ್ರಯವನ್ನು ನಾನು ಮೋಸದಿಂದ ಮಾಡಿಸಿಕೊಂಡಿರುತ್ತೇನೆ ಎಂದರೆ ಸುಳ್ಳು . ಐಟಂ ನಂಃ 4 ರ ಮೇಲೆ ನನಗೆ ಯಾವುದೆ ವೈಯಕ್ತಿಕ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ನನ್ನ ತಾಯಿ ಅವರ ಅನಾರೋಗ್ಯದಿಂದ ಐಟಂ ನಂಃ 4 ನ್ನು ನನಗೆ ಮಾರಿರುವುದಾಗಿ ನಾನು ಹೇಳಿರುತ್ತೇನೆ. ಐಟಂ ನಂಃ 4 ರ ಕ್ರಯದ ಕರಾರು ಕಾನೂನು ಬಾಹಿರ ಆಗಿದ್ದು, ಅದು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಅದು ಎಲ್ಲರಿಗೂ ಸಮವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ನಾನು , 3 ಮತ್ತು 5 ನೇ ಪ್ರತಿವಾದಿಗಳು ಒಬ್ಬರಿಗೊಬ್ಬರು ತಮ್ಮ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ದಾಖಲಾತಿಗಳನ್ನು ಸೃಷ್ಟಿ ಮಾಡಿ ವಾದಿಗೆ ಹಿಸ್ಸೆ ಕೊಡಲು ತಪ್ಪಿಸಲು ತಯಾರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಮತ್ತು ವಾದಿಗೆ ಎಲ್ಲಾ ಶೆಡ್ಯೂಲ್ ಸ್ವತ್ತಿನಲ್ಲೂ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸುಳ್ಳು.

ಪಾಟೀ ಸವಾಲುಃ ಶ್ರೀ ಕೆ ಬಿ ಎಂ ವಕೀಲರಿಂದ 6 ನೇ ಪ್ರತಿವಾದಿಯ ಪರ

ಐಟಂ ನಂಃ 2 ಸ್ವತ್ತು ಪ್ರತಿವಾದಿ 6 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿ 6 ರವರು ಐಟಂ ನಂಃ 2 ರಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಈ ವಿಚಾರ ನಮ್ಮ ಕುಟುಂಬದ ಸದಸ್ಯರಿಗೆ ಗೊತ್ತು ಎಂದರೆ ಸರಿ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.

Dw-4

Dw-4